ಟಿಪ್ಪಣಿ ಹಾಳೆ

Providing water supply and drilling of borewells in ward no-01 and 02 of yelahanka Sub division

ವಿಷಯ ..... ಪುಟದ ಸಂಖ್ಯೆ -01-

No-002 02 & YNK Sub Div:CR ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: Providing water supply and drilling of borewells in ward no-01 and 02 of yelahanka Sub division

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ಉಪ ವಿಭಾಗದ ವಾರ್ಡ್ ನಂ-01 & 02 ರ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವ ಉಂಟಾಗಿರುತ್ತದೆ. ಈಗಾಗಲೇ ಕೊರೆದಿರುವ ಬೋರ್‌ವೆಲ್‌ಗಳಲ್ಲಿ ಅಂತರ್‌ಜಲ ಮಟ್ಟವು ಗಣನೀಯವಾಗಿ ಕಡಿಮೆಯಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಸದರಿ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಮತ್ತು ದಿನನಿತ್ಯದ ಉಪಯೋಗಕ್ಕೆ ಬೋರ್‌ವೆಲ್ ನೀರನ್ನೆ ಅವಲಂಭಿಸಿಕೊಂಡಿರುತ್ತಾರೆ. ಆದುದರಿಂದ ಹೊಸದಾಗಿ ಕೊಳವೆ ಭಾವಿಗಳನ್ನು ಕೊರೆಸಿ ನೀರು ಪೂರೈಸುವುದು ಅತ್ಯಾವಶ್ಯಕವಾಗಿರುತ್ತದೆ ಮತ್ತು ಸ್ಥಳೀಯ ಸಾರ್ವಜನಿಕರು ಕುಡಿಯುವ ನೀರಿನ ಬಗ್ಗೆ ಅತಿ ಹೆಚ್ಚು ಅಹವಾಲುಗಳನ್ನು ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರುಗಳಿಗೆ ಸಲ್ಲಿಸಿರುತ್ತಾರೆ ಮುಂದುವರೆದು ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು ಸದರಿ ಕಾಮಗಾರಿಯನ್ನು 14ನೇ ಹಣಕಾಸು ಯೋಜನೆಯಡಿಯಲ್ಲಿ 2019-20ನೇ ಸಾಲಿನ ಲೆಕ್ಕಶಿರ್ಷಿಕೆ ಪಿ- 3293 ರಡಿಯಲ್ಲಿ ಸೇರಿಸಿ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ತಿಳಿಸಿರುತ್ತಾರೆ.

ಅದರಂತೆ ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು ರೂ.75.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಪಿ.ಆರ್.ಇ.ಡಿ. ಎಸ್.ಇ.ಆರ್.ಡಿ.ಇ.ಡಿ ಮತ್ತು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1. ಭೂ ಗರ್ಭ ಶಾಸ್ತ್ರಜ್ಞರಿಂದ ಕೊಳವೆ ಬಾವಿಯ ಗುರುತು ಮಾಡುವುದು.
2. ಕೊಳವೆ ಬಾವಿಯನ್ನು ಕೊರೆಸುವುದು.
3. ಉತ್ತಮ ಗುಣ ಮಟ್ಟದ ಕೇಸಿಂಗ್ (ಸಿ.ಐ) ಪೈಪ್ ಅಳವಡಿಸುವುದು.
4. ಉತ್ತಮ ಗುಣಮಟ್ಟದ ಪಿ.ವಿ.ಸಿ ಕೇಸಿಂಗ್ ಅಳವಡಿಸುವುದು.
5. ಪಂಪ್‌ಸೆಟ್ ಮತ್ತು ಮೋಟಾರ್ ಅಳವಡಿಸುವುದು.
6. ಉತ್ತಮ ಗುಣಮಟ್ಟದ ಐ.ಎಸ್.ಐ ಮಾರ್ಕ್ ಜಿ.ಐ ಪೈಪ್ ಅಳವಡಿಸುವುದು.
7. ಪಂಪ್ ಮತ್ತು ಮೋಟಾರ್‌ಗೆ ಬೇಕಾಗುವ ಸಾಮಾಗ್ರಿಗಳು, ಕೇಬಲ್ ವಯರ್‌ಗಳು ಇತ್ಯಾದಿ ಒದಗಿಸುವುದು.
8. ಮಣ್ಣು ಅಗೆತ ಕೆಲಸ ಮಾಡಿ ಪೈಪ್ ಲೈನ್ ಕೊಳವೆ ಸಾಲುಗಳನ್ನು ಅಳವಡಿಸುವುದು ಇತ್ಯಾದಿ.

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಅದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, 002-20-000058 ರಂತೆ ಜಾಬ್ ನಂಬರ್ ದೊರೆತಿರುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

230
23/12/19

ಸ.ಅ (ವಾರ್ಡ್-ನಂ 2)

Asst. Executive Engineer
ಸಹಾ.ಅ (ಯ.ಉ.ವಿ)
Yelahanka Sub. Divison
(BBMP Ynk. Zn)
Yelahanka, Bangalore

ವಿಷಯ .....

ಪಂಕ್ತಿಯ ಸಂಖ್ಯೆ

ಕಂಡಿಕೆ(1) ಮತ್ತು (2)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019-20ನೇ ಸಾಲಿನ 14ನೇ ಹಣಕಾಸು ಆಯೋಗ ಪಿ.ತ2ಶತರ ಅನುದಾನದಡಿ ಮಂಜೂರಾಗಿರುವ ರೂ.75.00ಲಕ್ಷಗಳ ಕಾಮಗಾರಿಯನ್ನು ಯಲಹಂಕ ಉಪ ವಿಭಾಗದ ವಾರ್ಡ್ ನಂ:01 ಮತ್ತು 02 ರರ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವ ಉಂಟಾಗಿದ್ದು, ಕೊರೆದಿರುವ ಬೋರ್‌ವೆಲ್‌ಗಳಲ್ಲಿ ಅಂತರ್‌ಜಲ ಮಟ್ಟವು ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಿ ನೀರು ಪೂರೈಸುವುದು ಅವಶ್ಯಕವಾಗಿರುವುದರಿಂದ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್.ದರಪಟ್ಟಿ ಹಾಗೂ ಪಿ.ಆರ್.ಇ.ಡಿ ಮತ್ತು ಎಸ್.ಇ.ಆರ್.ಡಿ.ಇ.ಡಿ ದರಪಟ್ಟಿಯನ್ನು ಅನುಸರಿಸಿ ರೂ.75.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಅಂದಾಜುಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ:002-20-000058 ದೊರೆತ್ತಿದ್ದು, ಅದರಂತೆ ಸದರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಗಾಗಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅನುಮೋದನೆ ಪಡೆಯಲು ಕೋರಿ ಕಡತವನ್ನು

ಕಾ.ಪ್ರ.ಅ(ಆ.ವಿ) 01/01/2020

ಮುಖ್ಯಲೆಕ್ಕಾಧಿಕಾರಿಯವರ ಕಛೇರಿ
03 JAN 2020
1286
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬ್ಯಾಟರಾಯನಪುರ, ಬೆಂಗಳೂರು-92.

ಮುಖ್ಯ ಲೆಕ್ಕಾಧಿಕಾರಿಯವರ ಕಛೇರಿ
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬ.ಬೃ.ಮ.ಪಾ.ಕ್ಕೆ ಅಭಿಯಂತರರು (ಯಲಹಂಕ ವಲಯ) ಕಂಡಿಕೆ (4) ರಲ್ಲಿ ವಿನಂತಿಸಿರುವಂತೆ ಕಡತವನ್ನು ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದೆ.

ಜಂಟಿ ಆಯುಕ್ತರು (ಯಲಹಂಕ)

ಕಂಡಿಕೆ (4) ರಲ್ಲಿ ವಿವರಿಸಿರುವಂತೆ ಸದರಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆಗೆ ಕಡತವನ್ನು ಮಂಡಿಸಿದೆ

ವಿಶೇಷ ಆಯುಕ್ತರು (ಯೋಜನೆ)

ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿ.ಯೋ/ಪಿ.ಆರ್/ 8469/2019-2020

ಮುಖ್ಯ ಅಭಿಯಂತರರು (ಯಲಹಂಕ ವಲಯ) ಮತ್ತು ಜಂಟಿ ಆಯುಕ್ತರು (ಯಲಹಂಕ) ರವರು ಮಂಡಿಸಿರುವ ವರದಿಯನ್ನು ಅವಗಾಹಿಸಲಾಗಿದ್ದು, ವಾರ್ಡ್-01 ರ ವ್ಯಾಪ್ತಿಯಲ್ಲಿ "Providing water supply and drilling of borewells in ward No.01 and 02 of Yelahanka sub division" ಕಾಮಗಾರಿಗೆ 2019-20 ನೇ ಸಾಲಿನ ಲೆಕ್ಕಶೀರ್ಷಿಕೆ "ಪಿ-3293" ಅನುದಾನದಡಿ ರೂ.75.00 ಲಕ್ಷಗಳಿಗೆ ಸಂಖ್ಯೆ:001-20-000023 ರಂತೆ ಕಾಮಗಾರಿ ಸಂಕೇತ ಪಡೆದು ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ ದೃಢೀಕರಿಸಿರುವುದಲಿಂದ, **ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಕಡ್ಡಾಯವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ಕೊಳವೆ ಬಾವಿ ಕೊರೆಯಲು ಅನುಮತಿ ಪಡೆಯುವ ಷರತ್ತಿಗೊಳಪಟ್ಟು,** ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಕೆಗಳು ಸಂಖ್ಯೆ:ಬಿ12 (1)/ಪಿಆರ್/394/2019-20, ದಿನಾಂಕ:25-09-2019 ರಂತೆ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಿದೆ.

1) ಕಾಮಗಾರಿ ನಿರ್ವಹಿಸಿರುವ ಸ್ಥಳದ GIS – Geo mapping ಛಾಯಾಚಿತ್ರಗಳು.
2) ಪ್ರಸ್ತಾಪಿತ ಕಾಮಗಾರಿಯನ್ನು ಯಾವುದೇ ಅನುದಾನದಲ್ಲಿ ಕೈಗೊಂಡಿರುವುದಿಲ್ಲ ಹಾಗೂ ಪುನಾರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ದೃಢೀಕರಣ.

ಜಂಟಿ ಆಯುಕ್ತರು (ಯಲಹಂಕ)

ವಿಶೇಷ ಆಯುಕ್ತರು (ಯೋಜನೆ)
ಬೃಪಸ್ ಬೆಂಗಳೂರು ಮಹಾನಗರ ಪಾಲಿಕೆ

EE(PR)

ಕಂಡಿಕೆ(1)ರಿಂದ(3)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019-20ನೇ ಸಾಲಿನ 14ನೇ ಹಣಕಾಸು ಆಯೋಗ ಪಿ.3293ರ ಅನುದಾನದಡಿ ಮಂಜೂರಾಗಿರುವ ರೂ.75.00ಲಕ್ಷಗಳ ಕಾಮಗಾರಿಯನ್ನು ಯಲಹಂಕ ಉಪ ವಿಭಾಗದ ವಾರ್ಡ್ ನಂ:1&2ರ ವ್ಯಾಪ್ತಿಯಲ್ಲಿ ಬರುವ Providing water supply and drilling of borewells in ward no-01 & 02 of yelahanka sub division ಎಂಬ ಕಾಮಗಾರಿಯು ಅವಶ್ಯಕತೆ ಇರುತ್ತದೆ. ಅದ್ದರಿಂದ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರಗಳು ಹಾಗೂ ಪಿ.ಆರ್.ಇ.ಡಿ ಮತ್ತು ಎಸ್.ಇ.ಆರ್.ಡಿ.ಇ.ಡಿ ದರಪಟ್ಟಿಯಂತೆ ರೂ.75.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಅಂದಾಜುಪಟ್ಟಿಗೆ ಈಗಾಗಲೇ ಕಾಮಗಾರಿಸಂಕೇತ:001-20-000023 ದೊರೆತ್ತಿದ್ದು, ಅದರಂತೆ ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)ಪಿ.ಆರ್/394/ 2019-20 ದಿ:25-9-2019 ರಂತೆ ಕಂಡಿಕೆ(7)ರಲ್ಲಿ ಮಾನ್ಯ ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿರವರು ಆಡಳಿತಾತ್ಮಕ ಅನುಮೋದನೆ ನೀಡಿರುವ ಮೇರೆಗೆ ಆಡಳಿತಾತ್ಮಕ ಟಿಪ್ಪಣಿಗೆ ಸಹಿ ಮಾಡಲಾಗಿದೆ.

ವಿಷಯ Providing water supply and distribution ಪುಟದ ಸಂಖ್ಯೆ ..... (04)
& borewells in ward No-01 & 02 ಕಡತದ ಸಂಖ್ಯೆ .....
ಯಲಹಂಕ Div.

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮುಂದುವರೆದು ಸದರಿ ಕಾಮಗಾರಿಯನ್ನು ತುರ್ತಾಗಿ ಅನುಷ್ಠಾನಗೊಳಿಸ ಬೇಕಾಗಿರುವುದರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗರವರು ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ಹಾಗೂ ಡಿಟಿಎಸ್ ಅನುಮೋದನೆ ನೀಡಲು ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಕಾ.ಪಾ.ಅ(ಆಡಳಿತ) 30/01/2020

(11) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಹಾಗೂ DTS ಅನುಮೋದನೆ ಕೋರಿದೆ. ಮುಂದಿನ ಆದೇಶಕ್ಕೆ ಸಲ್ಲಿಸಿದೆ.

12 ಮು ಅ (ಯಲ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಂಡಿಸಿದೆ.

ವಿಷಯ:– Providing water supply and drilling of borewells in ward no-01 & 02 of yelahanka sub division ಎಂಬ ಕಾಮಗಾರಿಯ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1) ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 16 /2019-20 dated: 31-01-2020.

* * * * *

(12) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ–01 ಮತ್ತು 02ರ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ 2019–20ನೇ ಸಾಲಿನ 14ನೇ ಹಣಕಾಸು ಆಯೋಗದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಜಾಬ್ ಸಂಖ್ಯೆ 001–20–000023 ರಂತೆ ದೊರೆತಿರುತ್ತದೆ.ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Providing water supply and drilling of borewells in ward no-01 & 02 of yelahanka sub division	75.00
	Total	75.00

(13) ಈ ಮೇಲ್ಕಂಡ ಕಾಮಗಾರಿಗೆ 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ, ಪಿ.ಆರ್.ಇ.ಡಿ ದರಗಳು ಹಾಗೂ ಪರಿಷ್ಕೃತ ದರಗಳನ್ವಯ ರೂ.75.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಸಂಖ್ಯೆ ಬ್ಯ.ಬೆಂ.ಮ.ಪಾ/ಮು.ಅ/ತಾ.ಮಂ/ಯ.ವ./ಪಿ.ಆರ್/ 281/2019–20 ದಿನಾಂಕ: 30–01–2020 ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್ – ಬಿ ಗೆ ಅನುಮೋದನೆ ನೀಡಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 31–01–2020 ರಂದು KTPP.Act and KW-3 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ The Times of India ದಿನ ಪತ್ರಿಕೆಯಲ್ಲಿ ದಿನಾಂಕ: 1–2–2020 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

(14)

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Providing water supply and drilling of borewells in ward no-01 & 02 of yelahanka sub division
2	ಅಂದಾಜು ಮೊತ್ತ	ರೂ. 75.00 ಲಕ್ಷಗಳು
3	ಇಂಡೆಂಟ್ ನಂ	**BBMP/2019-20 / OW/ Work_ INDENT 40077**
3	ಅನುದಾನದ ಯೋಜನೆ ಹೆಸರು	2019–20ನೇ ಸಾಲಿನ 14ನೇ ಹಣಕಾಸು ಯೋಜನೆ

4	ಲೆಕ್ಕಶೀರ್ಷಿಕೆ	ಪಿ– 3293
5	ಆಡಳಿತಾತ್ಮಕ ಅನುಮೋದನೆ	ಮಾನ್ಯ ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿರವರಿಂದ ಪಡೆಯಲಾಗಿದೆ
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ.75.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬೃಬೆಂ.ಮ.ಪಾ/ ಮು.ಅ/ ತಾ.ಮಂ/ ಯ.ವ./ಪಿ.ಆರ್/281/2019–20 ದಿನಾಂಕ. 30–01–2020 ರಂತೆ
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 65.91ಲಕ್ಷಗಳು
9	ಟೆಂಡರ್‌ನ ಪೂರ್ವ ಭಾವಿ ಸಭೆ	ರಂದು ಸಂಜೆ 3.00 ಗಂಟೆಗೆ.
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	14-2-2020 upto 16.00 hrs
11	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	15-02-2020 after 16.00 hrs

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 15–02–2020 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರೂ ಗುತ್ತಿಗೆದಾರರು ಬಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri K Lakshminarayana Reddy
2. Sri Gopireddy

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, Sri Gopireddy ರವರು ಒಟ್ಟು ಇ.ಎಂ.ಡಿ ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾವತಿಸಿರುತ್ತಾರೆ. ಹಾಗೂ Sri K Lakshmi narayana reddy ರವರು ಇ.ಎಂ.ಡಿ ಮೊತ್ತ ರೂ. 1.00 ಲಕ್ಷಗಳನ್ನು ಇ ಪ್ರಕ್ಯೂರ್‌ಮೆಂಟ್ ಮುಖಾಂತರ ಪಾವತಿಸಿದ್ದು, ಉಳಿದ ಮೊತ್ತ ರೂ. 50.000.00 ಗಳನ್ನು ಬಿ.ಜಿ ನಂ 212671/02/2020 ದಿನಾಂಕ 13–2–2020 ರಂತೆ ಈ ಕಛೇರಿಗೆ ನೀಡಿರುತ್ತಾರೆ. ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, KW-3 Standard Tender Document ಅನುಸಾರ ನಿಗದಿಪಡಿಸಿರುವ ಎಲ್ಲಾ ಷರತ್ತುಗಳಂತೆ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುತ್ತಾರೆ. (ತಾಂತ್ರಿಕ ಮೌಲ್ಯಮಾಪನದ ವಿವರಗಳು ಮತ್ತು ತುಲಾನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ.)

ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ Sri K Lakshminarayana reddy and Sri Gopireddy ರವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

26/2/2020

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(18) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(19) E.E (yelahanka)

(20) ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್ ಸಂಖ್ಯೆ: 01&02 ರಲ್ಲಿ 2019–20ನೇ ಸಾಲಿನ 14ನೇ ಹಣಕಾಸು ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲು ಒಟ್ಟು ಅಂದಾಜು ಮೊತ್ತ ರೂ. 75.00 ಲಕ್ಷಗಳಿಗೆ ದಿನಾಂಕ: 31–01–2020 ರಂದು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಇಬ್ಬರೂ ಗುತ್ತಿಗೆದಾರರಾದ Sri K Lakshminarayana reddy and Sri Gopireddy ರವರು ಟೆಂಡರ್‌ನಲ್ಲಿ ನಿಗಧಿಪಡಿಸಿದ ಷರತ್ತುಗಳಂತೆ ಅರ್ಹ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಅನುಮೋದನೆ ನೀಡಿರುತ್ತಾರೆ. ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರೂ ಬಿಡ್ದುದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018–19 ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಟೆಂಡರ್ ಗಿಟ್ಟ ಮೊತ್ತ 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ.	ಗುತ್ತಿಗೆದಾರರು ನಮೂದಿಸಿರುವ ದರಗಳು	2018–19ನೇ ಸಾಲಿನ ಎಸ್.ಆರ್‌ಧರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ	ಷರಾ
01	Sri K Lakshminarayana reddy	6591984.67	6591984.67	68,54,528.87	(+)3.98%	(+)3.98%	
02	Sri Gopireddy			70,66,585.79	(+)7.20%	(+)7.20%	

(21) ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri K Lakshminarayana reddy ರವರು ನಮೂದಿಸಿರುವ ರೂ. 68,54,528.87 ಗಳು ಅತಿ ಕಡಿಮೆ ದರಗಳಾಗಿರುತ್ತದೆ.

(22) ಆದುದರಿಂದ ಗುತ್ತಿಗೆದಾರರಾದ Sri K Lakshminarayana reddy ರವರು ನಮೂದಿಸಿರುವ ರೂ. 68,54,528.87 ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018–19 ಸಾಲಿನ ದರಗಳು ಹಾಗೂ ಪಿ.ಆರ್.ಇ.ಡಿ ದರಗಳಿಗೆ ಹಾಗೂ ದಿನಾಂಕ: 03–01–2020ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ (+)3.98% ರಷ್ಟು ಹೆಚ್ಚು ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರಾದ Sri K Lakshminarayana reddy ರವರು ನಮೂದಿಸಿರುವ ದರ ರೂ. 68,54,528.87 ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ (+)3.98% ರಷ್ಟು ಹೆಚ್ಚಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

03/03/2020
ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರ ಕಛೇರಿ
(22ನೆ) 1663
ಬಿ.ಬಿ.ಎಂ.ಪಿ,ಯಲಹಂಕ ವಲಯ

ಮುಖ್ಯ ಅಭಿಯಂತರರು (ಯಲಹಂಕ ವಲಯ)

3/3

ತಮ್ಮ ಅವಗಾಹನೆಗೆ ತರುತ್ತಾ, 22ರ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ಆರ್ಥಿಕ ಬಿಡ್‌ನ್ನು ಪರಿಶೀಲಿಸಲಾಗಿ ಇಬ್ಬರು ಗುತ್ತಿಗೆದಾರರಲ್ಲಿ ಎಲ್-1 ಗುತ್ತಿಗೆದಾರರಾದ ಶ್ರೀ.ಕೆ.ಲಕ್ಷ್ಮೀನಾರಾಯಣ ರೆಡ್ಡಿರವರು ನಮೂದಿಸಿರುವ ರೂ68,54,528.87ಳು(+3.98%) ಅತೀ ಕಡಿಮೆ ದರಗಳಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿರುವುದರಿಂದ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

TA

24 ಮು ಶ್ರೀ (ಯಲ) ಕೆಂಡಿಕೆ (20) ರಂತೆ (21) ರ ವರೆಗೆ ವಿವರಿಸಿರುವಂತೆ ಟೆಂಡರ್ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

25 ವೈಸ್ ವಲಯ ಆಯುಕ್ತರ (ಯಲ.ವ)

ಆಯುಕ್ತರ ಕಛೇರಿ
ಬಿ.ಬಿ.ಎಂ.ಪಿ
ದಿನಾಂಕ 04/3/2020
ಸಂ 9672
(ಯಲಹಂಕ)

ಪ್ರಸ್ತಾವನೆಯು, Providing water supply and drilling of borewells in Ward No.01 & 02 ಕಾಮಗಾರಿಯ ಟೆಂಡರ್ ಅನುಮೋದನೆ ಕೋರಿರುವುದಾಗಿರುತ್ತದೆ.

ಈ ಮೇರೆಗೆ ಪರಿಶೀಲಿಸಲಾಗಿ, ಪ್ರಸ್ತಾಪಿತ ಕಾಮಗಾರಿಗೆ 2019-2020 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3283 ಅಡಿ ರೂ.75.00 ಲಕ್ಷಗಳಿಗೆ ಸಂಖ್ಯೆ:001-20-000023 ರಂತೆ ಕಾಮಗಾರಿ ಸಂಕೇತ ಪಡೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅದರಂತೆ, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರಾದ ಶ್ರೀ ಕೆ.ಲಕ್ಷ್ಮೀನಾರಾಯಣ ರೆಡ್ಡಿ ಮತ್ತು ಶ್ರೀ ಗೋಪಿರೆಡ್ಡಿ ರವರುಗಳು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುವುದಾಗಿ ಕಾರ್ಯಪಾಲಕ ಅಭಿಯಂತರರು (ಯಲಹಂಕ) ರವರು ಧೃಢೀಕರಿಸಿರುತ್ತಾರೆ.

ಈ ಮೇರೆಗೆ ಅರ್ಥಿಕ ಬಿಡ್ಡನ್ನು ತೆರೆಯಲಾಗಿ ಶ್ರೀ ಕೆ.ಲಕ್ಷ್ಮೀನಾರಾಯಣ ರೆಡ್ಡಿ ರವರು ಎಲ್-01 ಗುತ್ತಿಗೆದಾರರಾಗಿದ್ದು, ಸದರಿಯವರು ರೂ.68,54,528.87 ಗಳನ್ನು ನಮೂದಿಸಿದ್ದು, ಸದರಿ ಮೊತ್ತವನ್ನು 2018-2019 ನೇ ಸಾಲಿನ ದರಪಟ್ಟಿಯಂತೆ ಟೆಂಡರ್‌ಗೆ ಬಂದಿರುವ ಮೊತ್ತ ರೂ.65,91,884.67 ಗಳಿಗೆ ಹೋಲಿಸಿದಾಗ ಶೇ.3.98% (+) ರಷ್ಟು ಹೆಚ್ಚುವರಿ ಹಾಗೂ ದಿನಾಂಕ:03-01-2020 ರಂದು ಹೊರಡಿಸಿರುವ ವ್ಯತ್ಯಾಸದ ದರಪಟ್ಟಿಗೆ ಹೋಲಿಸಿದಾಗ ಶೇ.3.98% ರಷ್ಟು ಹೆಚ್ಚುವರಿ ದರಗಳಾಗಿರುವುದರಿಂದ ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ಸಂಖ್ಯೆ:ಬಿ12 (1)/ಪಿಆರ್/394/2019-2020, ದಿನಾಂಕ:25-09-2019 ರಂತೆ ಟೆಂಡರ್ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ಯಲಹಂಕ) ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಅಯುಕ್ತರು ಕಾಲ-ಕಾಲಕ್ಕೆ ಹೊರಡಿಸುವ ಇನ್ನಿತರೆ ಸುತ್ತೋಲೆ / ಆದೇಶಗಳನ್ನು ಪಾಲಿಸುವ ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ಸಂಖ್ಯೆ:ಬಿ12(1)/ಪಿ.ಆರ್/394/2019-20, ದಿನಾಂಕ:25-09-2019 ರಂತೆ ಪ್ರಸ್ತಾಪಿತ ಟೆಂಡರ್ ಅನ್ನು ಅನುಮೋದಿಸಿದೆ.

1) ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ / ಅನುದಾನಗಳಲ್ಲಿ ಕೈಗೊಂಡಿಲ್ಲದೇ ಇರುವ ಮತ್ತು ಪುನಾರಾವರ್ತನೆಯಾಗದಿರುವ ಬಗ್ಗೆ ಧೃಢಪಡಿಸಿಕೊಳ್ಳುವುದು.
2) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/-2019-20/ಪಿಆರ್/11/2018-19, ದಿನಾಂಕ:12-06-2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಜಿಬಿಎಂಪಿ/ಆ/ಪಿ.ಆರ್/5287/ 2019-2020, ದಿನಾಂಕ:05-11-2019 ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸಿರುವ ಬಗ್ಗೆ ಧೃಢಪಡಿಸಿಕೊಳ್ಳುವುದು.
3) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಕಡ್ಡಾಯವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ಕೊಳವೆ ಬಾವಿ ಕೊರೆಯಲು ಅನುಮತಿ ಪಡೆಯುವುದು.
4) ಗುತ್ತಿಗೆದಾರರು ಅವಶ್ಯಕ ದಾಖಲಾತಿಗಳನ್ನು ಇ-ಪೋರ್ಟಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಅಪ್ಲೋಡ್ ಮಾಡಿರುವ ಹಾಗೂ ಪ್ರಸ್ತಾವನೆಯಲ್ಲಿ ಕೆಟಿಪಿಪಿ ಕಾಯ್ದೆಗೆ ವ್ಯತಿರಿಕ್ತವಾದ/ ಪ್ರತಿಕೂಲವಾದ ಯಾವುದೇ ಅಂಶಗಳು ಇಲ್ಲದೇ ಇರುವ ಕುರಿತು ಹಾಗೂ ಪ್ರಸ್ತಾಪಿತ ಕಾಮಗಾರಿ ಸಂಬಂಧ ಇ-ಪೋರ್ಟಲ್‌ನಲ್ಲಿ ಯಾವುದೇ ಮೇಲ್ಮನವಿ ಇಲ್ಲದೇ ಇರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಕಾರ್ಯಾದೇಶ ನೀಡುವ ಪೂರ್ವದಲ್ಲಿ ಧೃಢಪಡಿಸಿಕೊಳ್ಳುವುದು.

ಮುಖ್ಯ ಅಭಿಯಂತರರು (ಯಲಹಂಕ)

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪೃ.ತಿ.ನೋ

ಬೆಂಗಳೂರು ಮಹಾನಗರ ಪಾಲಿಕೆ
2237
ಅಭಿಯಂತರರ ಕಛೇರಿ
13 MAR 2020
ಮುಖ್ಯ ಅಭಿಯಂತರರು
ಬಿ.ಬಿ.ಎ,ಯಲಹಂಕ ವಲಯ.